ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ಯಡಿಯೂರು ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: **1.1.16**

ಈ ವಾರದ ಮುನ್ಸೂಚನೆ **(2-1-16 to 6.1.16 ವರೆಗೆ)**

ನಿಯತಾಂಕಗಳು	2/1/16	3/1/16	4/1/16	5/1/16	6/1/16
ಮಳೆ (ಮಿ ಮಿ)	0	0	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	31	30	31	30	31
ಕನಿಷ್ಠ ಉಷ್ಣಾಂಶ (ಡಿ.ಸೆ.)	13	13	14	14	14
ಮೋಡ (ಪ್ರಮಾಣ)	1	1	3	2	4
ಆರ್ದ್ರತೆ ೭.೨೦ ಬೆ (ಶೇ)	68	67	70	67	74
ಆರ್ದ್ರತೆ ೨.೨೦ ಮ (ಶೇ)	43	44	49	42	42
ಗಾಳಿಯ ವೇಗ (ಕಿ.ಮಿ/ಗಂಟೆಗೆ)	4	6	4	8	4
ಗಾಳಿಯ ದಿಕ್ಕು (ಡಿಗ್ರಿ)	70	80	100	90	110

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ತುಮಕೂರು ಹಾಗೂ ಸುತ್ತಮುತ್ತ ಮುಂದಿನ ದಿನಗಳಲ್ಲಿ ಒಣಹವೆ ಮುಂದುವರೆಯಲಿದ್ದು, ದಿನದ ಗರಿಷ್ಠ ಉಷ್ಣಾಂಶವು 30-31°C ಮತ್ತು ಕನಿಷ್ಠ 13-14°C ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 67-74% ಇದ್ದು, ಮಧ್ಯಾಹ್ನ 42-49% ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 4-8 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ✓ ಕಟಾವು ಮಾಡಿರುವ ರಾಗಿ, ಜೋಳ ಮತ್ತು ಇತರೆ ಬೆಳೆಗಳನ್ನು ಚೆನ್ನಾಗಿ ಒಣಗಿಸಬೇಕು
- ✓ ಹಿಂಗಾರಿನಲ್ಲಿ ಬಿತ್ತನೆಯಾದ ಬೆಳೆಗಳಿಗೆ ನೀರು ಕೊಡಬೇಕು
- ✓ ಜಾನುವಾರು: ಕೊಟ್ಟಿಗೆಯನ್ನು ಶುಚಿಯಾಗಿ ಇಟ್ಟುಕೊಳ್ಳುವುದು ಮತ್ತು ಜಾನುವಾರುಗಳನ್ನು ಚಳಿಗಾಳಿಯಿಂದ ರಕ್ಷಿಸಬೇಕು. ಜಾನುವಾರು, ರೇಷ್ಮೆ ಹಾಗೂ ಕೋಳಿ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು.
- ✓ ಕೊಯ್ಲು ಮಾಡಿದ ರಾಗಿ, ಜೋಳ ಇನ್ನಿತರ ಧಾನ್ಯಗಳನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ, ಶುಚಿಗೊಳಿಸಿ ಶೇಖರಣೆ ಮಾಡುವುದು.

ಸಸ್ಯ ಸಂರಕ್ಷಣೆ:

- ✓ **ಟೊಮ್ಯಾಟೊ: ಅಂಗಮಾರಿ ರೋಗವಿದ್ದರೆ ಮೆಟಲಾಕ್ಸಿಲ್ (೨ಗ್ರಾಂ ಪ್ರತಿ ಲೀ ಗೆ) ಸಿಂಪಡಿಸಬೇಕು**
- ✓ **ಮಾವಿನಲ್ಲಿ ಬೂದಿ ರೋಗ ಕಂಡುಬಂದರೆ ಗಂಧಕ (ಸಲ್ಫೆಕ್ಸ್) ೨ಗ್ರಾಂ ಪ್ರತಿ ಲೀ ಗೆ ಸಿಂಪಡಿಸಬೇಕು.**
- ✓ **ನೆಲಕ್ಕೆ ತಾಕುವ ರೆಂಬೆಗಳನ್ನು ಕತ್ತರಿಸಿ.**

ನೋಡಲ್ ಅಧಿಕಾರಿ:
ಕೃಷಿ ಹವಾಮಾನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು